ಊ) ಮೇಲಿನ ಸಂಸ್ಥೆಯು ತನ್ನ ವಹಿವಾಟಿನಲ್ಲಿ ಲಾಭವನ್ನೇನಾದರೂ ಮಾಡಿದೆಯೆ, ಹಾಗಿದ್ದಲ್ಲಿ ಲಾಭದ ಮೊತ್ತವೆಷ್ಟು, ಹಾಗಿಲ್ಲದಿದ್ದಲ್ಲಿ ಈ ಸಂಸ್ಥೆಗೆ ಉಂಟಾದ ನಷ್ಟವೆಷ್ಟು?

ಋ) ಮೇಲಿನ ಸಂಸ್ಥೆಯ ಕಾರ್ಯ ವಿಭಾಗದಲ್ಲಿರುವ ದೋಷಗಳನ್ನು ಸರಿಪಡಿಸಲು ಸರ್ಕಾರ ಡವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಹೌದು.

ಆ) ಕರ್ನಾಟಕ ರಾಜ್ಯಕ್ಕೆ ಕಾರ್ಯ ವ್ಯಾಪ್ತಿ ಇರುವುದು.

ಇ) ನಿಪ್ಪಾಣಿ ಮತ್ತು ನೆರೆ ಹೊರೆಯ ಪ್ರದೇಶಗಳಲ್ಲಿ ತಂಬಾಕನ್ನು ಖರೀದಿಸಿ ರೈತರ ಬೇಡಿಕೆಯಂ ಪ್ರಕಾರ ಮತ್ತು ವ್ಯವಹಾರ ದೃಷ್ಟಿಯಿಂದ ನಿಪ್ಪಾಣಿಯ ವಿಭಾಗದಲ್ಲಿ ಶೇಖರಣೆ ಮಾಡಲಾಗಿತ್ತು, ಫೆಡರೇಷನ್ ಇನ್ನಿತರ ತಂಬಾಕು ಬೆಳೆಯುವ ಪ್ರದೇಶಗಳಲ್ಲಿ ತಂಬಾಕು ಖರೀದಿ ಮಾಡಲು ಪ್ರಯತ್ನಿಸಿದಾಗ್ಯೂ ಪ್ರಯೋಜನ ಕಾರಿಯಾಗಿಲ್ಲ.

ಈ) ಫೆಡರೇಷನ್ ಮೂಲಕ ತಂಬಾಕು ಬೆಳೆಗಾರರಿಗೆ ಯಾವ ಸಬ್ಸಿಡಿಯನ್ನು ನೀಡಿರುವುದಿಲ್ಲ.

ಉ) ಫೆಡರೇಷನ್ನಿನ ಆಡಳಿತ ಮಂಡಳಿಯನ್ನು ರದ್ದು ಪಡಿಸಿ, ಸಂಸ್ಥೆಯ ಕಾರ್ಯ ವಿಧಾನ ದಲ್ಲಿರುವ ಲೋಪದೋಷಗಳನ್ನು ಸರಿಪಡಿಸಲು ಬೆಳಗಾಂ ಜಿಲ್ಲಾಧಿಕಾರಿಗಳನ್ನು ವಿಶೇಷಾಧಿಕಾರಿ ಗಳನ್ನಾಗಿ ನೇಮಿಸಲಾಗಿದೆ.

ಊ) ಸಂಸ್ಥೆಯು ತನ್ನ ವಹಿವಾಟಿನಲ್ಲಿ ಈ ವರೆವಿಗೂ ಲಾಭ ಗಳಿಸಿರುವುದಿಲ್ಲ ಹಂಗಾಮಿ ಆಸ್ತಿ ಹುತ್ತು ಜವಾಬ್ದಾರಿ ತಃಖ್ತೆ (೩೦-೬-೧೯೮೫)ರ ಪ್ರಕಾರ ೧,೫೬,೪೫,೪೪೧-೬೬ ರೂ. ಗಳ ಕೂಡಿಬಿದ್ದ ಹಾನಿಯಲ್ಲಿರುತ್ತದೆ.

ಋ) ಮೇಲಿನ (ಇ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸಂತೇಬಾಚನಹಳ್ಳಿಯಲ್ಲಿ ವಿದ್ಯುತ್ ಮಂಡಲಿಯ ಶಾಖಾಧಿಕಾರಿಗಳ ಕಛೇರಿ ತೆರೆಯುವ ಬಗ್ಗೆ

೧೩೮೧. ಶ್ರೀ ಕೃಷ್ಣ (ಕೃಷ್ಣರಾಜ ಪೇಟೆ) ಮಾನ್ಯ ವಿದ್ಯುತ್‌ಚ್ಛಕ್ತಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಸಂತೇಬಾಚನಹಳ್ಳಿ ಹೋಬಳಿಯಲ್ಲಿ ಎಷ್ಟು ಗ್ರಾಮಗಳಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸೌಕರ್ಯ ಕಲ್ಪಿಸಲಾಗಿದೆ.

ಆ) ಸಂತೇಬಾಚನಹಳ್ಳಿ, ಹಳ್ಳಿಗಳ ವಿದ್ಯುಚ್ಛಕ್ತಿ ಗ್ರಾಹಕರು ತಮ್ಮ ವಿದ್ಯುತ್ ಬಿಲ್ಲುಗಳನ್ನು ಕಟ್ಟಲು ಹಾಗೂ ಇತರೆ ವಿದ್ಯುಚ್ಛಕ್ತಿ ಸೌಕರ್ಯಗಳಿಗೆ ಅರ್ಜಿಗಳನ್ನು ಸಲ್ಲಿಸಲು ತಾಲ್ಲೂಕು ಕೇಂದ್ರವಾದ ಕೃಷ್ಣರಾಜಪೇಟೆಗೆ ಹೋಗಬೇಕಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಇ) ಸದರಿ ಹೋಬಳಿಯ ಗ್ರಾಮಾಂತರ ವಿದ್ಯುತ್ ಗ್ರಾಹಕರಿಗೆ ಅನುಕೂಲವಾಗುವಂತೆ ಸಂತೇ ಬಾಚನಹಳ್ಳಿಯಲ್ಲಿ ವಿದ್ಯುತ್ ಮಂಡಲಿಯ ಶಾಖಾಧಿಕಾರಿಗಳ ಕಛೇರಿಯನ್ನು ಸ್ಥಾಪನೆ ಮಾಡಲು ಕ್ರಮ ತೆಗೆದುಕೊಳ್ಳುತ್ತಾರೆಯೇ?

ಶ್ರೀ ಜೆ. ಎಸ್. ದೇಶ್‌ಮುಖ್ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ಕೃಷ್ಣರಾಜಪೇಟೆ ತಾಲ್ಲೂಕಿನ ಸಂತೇಬಾಚನಹಳ್ಳಿ ಹೋಬಳಿಯಲ್ಲಿನ ೧೯ ಗ್ರಾಮಗಳಲ್ಲಿ ೧೪೮ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸೌಕರ್ಯ ಕಲ್ಪಿಸಲಾಗಿದೆ.

ಆ) ಹೌದು. ಸಂತೇಬಾಚನಹಳ್ಳಿಯಲ್ಲಿ ವಿದ್ಯುತ್ ಮಂಡಲಿಯ ಕಛೇರಿ ಇಲ್ಲ. ಇದಕ್ಕೆ ಸಂಬಂಧಪಟ್ಟ ವ್ಯವಹಾರವನ್ನು ಕೃಷ್ಣರಾಜಪೇಟೆಯಲ್ಲಿರುವ ಮಂಡಲಿಯ ಕಛೇರಿಯು ನಿರ್ವಹಿಸುತ್ತದೆ.

ಗ್ರಾಹಕರಿಂದ ಹಣವನ್ನು ಮಂಡಳಿಯವರು ಸಂತೇಬಾಚನಹಳ್ಳಿಯಲ್ಲಿ ತಿಂಗಳಿಗೆ ಒಂದು ಸಲ ಸ್ವೀಕರಿಸುತ್ತಾರೆ.

ಇ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ರಾಜ್ಯದಲ್ಲಿ ಇರುವ ವಿಭಾಗ, ಉಪವಿಭಾಗ, ತಾಲೂಕುಗಳ ಪುನರ್ವಿಂಗಡನೆ ಮಾಡಲು ಯೋಜಿಸಿದ್ದು ಅದಕ್ಕಾಗಿ ಮಾಹಿತಿಯನ್ನು ಸಂಗ್ರಹಿಸುತ್ತಿದೆ. ಹೀಗೆ ಪುನರ್ವಿಂಗಡನೆ ಮಾಡುವಾಗ ಸಂತೇಬಾಚನಹಳ್ಳಿ ಹೋಬಳಿಯ ಗ್ರಾಹಕರ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ಸಾಧ್ಯವಾದ ಮಾರ್ಪಾಡನ್ನು ಮಾಡಲಾಗುತ್ತದೆ.

ಹೊಸದುರ್ಗ ತಾಲ್ಲೂಕಿನ ಕೋಡಿಹಳ್ಳಿ ಗ್ರಾಮದ ಮಹಿಳೆಗೆ ಮಾಸಾಶನ

೮೨೩. ಶ್ರೀ ಜಿ. ರಾಮದಾಸ್ (ಹೊಸದುರ್ಗ) ಈ ಕೆಳಕಂಡ ಪ್ರಶ್ನೆಗಳಿಗೆ ಕಂಡಾಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ಹೊಸದುರ್ಗ ತಾಲ್ಲೂಕಿನಲ್ಲಿ ಕೋಡಿ ಹಳ್ಳಿ ಗ್ರಾಮದ ಓರ್ವ ಮಹಿಳೆಗೆ ಎರಡೂ ಮಾಶಾಸನ ಹೇತವ ಪಾವತಿಯಾಗುತ್ತಿರುವುದು ನಿಜವೆ?

ಆ) ಹಾಗಿದ್ದಲ್ಲಿ,ಇದಕ್ಕೆ ಕಾರಣಕರ್ತರು;ಹಾಗೂ ಇದರ ಬಗ್ಗೆ ಸರ್ಕಾರದವರು ತನಿಖೆ ನಡೆಸುವರೆ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಹೊಸದುರ್ಗ ತಾಲ್ಲೂಕಿನಲ್ಲಿ ಕೋಡಿ ಹಳ್ಳಿ ಗ್ರಾಮದ ಓರ್ವ ಮಹಿಳೆಗೆ ಎರಡು ಮಾಶಾಸನ ಹೇತನ ಮಂಜೂರು ಮಾಡಿರುವ ಯಾವುದೇ ಪ್ರಸಂಗ ಸರ್ಕಾರದ ಗಮನಕ್ಕೆ ಬಂದಿಲ್ಲ

ಆ) ಆದ್ದರಿಂದ ಕಾರಣಕರ್ತರನ್ನು ಗುರುತಿಸುವುದಾಗಲಿ ಅಥವಾ ತನಿಖೆ ಮಾಡುವ ವಿಷಯ ಉದ್ಭವಿಸುವುದಿಲ್ಲ.

ಕಾಳಿ ಜಲವಿದ್ಯುತ್ ಯೋಜನೆಯಲ್ಲಿ ಮುಳುಗಡೆ ಯಾಗುವ ಹಳ್ಳಿಗಳು

೧೦೯೩. ಶ್ರೀ ಪ್ರಭಾಕರ್ ಎಸ್. ರಾಣೆ (ಕಾರವಾರ) ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾಳಿ ಜಲ ವಿದ್ಯುತ್ ಯೋಜನೆಯ ಮತ್ತು ವಿನೇಯ ಹಂತದಲ್ಲಿ ಮುಳುಗಡೆಯಾಗುವ ಹಳ್ಳಿಗಳ ಸಂಖ್ಯೆ ಎಷ್ಟು? ಮತ್ತು ಅವು ಯಾವುವು?

ಆ) ಮುಳುಗಡೆಯಾಗುವ ಹಳ್ಳಿಗಳಿಗೆ ಯಾವ ಸ್ಥಳಗಳಲ್ಲಿ ಪುನರ್ವಸತಿಗೊಳಿಸಲು ಸರಕಾರದವರು ಯೋಚಿಸಿರುವರೆ?

ಶ್ರೀ ಜೆ. ಎಸ್. ದೇಶ್‌ಮುಖ್ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ಕಾಳಿನದಿ ಜಲವಿದ್ಯುತ್ ಯೋಜನೆ ಎರಡನೇ ಹಂತದ ಮುಳುಗಡೆ ವ್ಯಾಪ್ತಿಗೆ ಬರುವಂತಹ ಹಳ್ಳಿಗಳ ಸಂಖ್ಯೆ ಒಟ್ಟು ೨೨. ಆ ಹಳ್ಳಿಗಳ ಹೆಸರುಗಳನ್ನು ಈ ಕೆಳಗೆ ಸೂಚಿಸಲಾಗಿದೆ.—

ದಾಂಡೇಲಿ ಅಣೆಕಟ್ಟು	ಕೋಡಸಹಳ್ಳಿ ಅಣೆಕಟ್ಟು	ಕದ್ರ ಅಣೆಕಟ್ಟು
	ಯಲ್ಲಾಪುರ ತಾಲ್ಲೂಕು	ಕಾರವಾರ ತಾಲ್ಲೂಕು
೧. ಬಿರಿಯಂ ಪಟ್ಟಿ	೧. ಕೋದಸಳ್ಳಿ	೧. ಕದ್ರ ಟಿ ೨
೨. ವಂಹಲಿಂಗ	೨. ಬರಬೆಲ್ಲಿ	೨. ಬಾಲು ವನೆ ಟಿ-೧ ಮತ್ತು ಟಿ-೨
೩. ಬಡಗುಂಡಂ	೩. ಕಳಿಚೆ ಟಿ-೫	೩. ವಿರ್ಜೆ
	೪. ಕಟ್ಟಿಗ	೪. ಕುಚ್ಚಿಗನ್
	೫. ದೇಹಳ್ಳಿ	೫. ದೇವ್ ಕರ್ ಟಿ-೧ ಮತ್ತು ಟಿ-೨
		೬. ಕೈಗಾ
		೭. ಹರ್ತಿಗ